ಕರ್ನಾಟಕ ಸರ್ಕಾರ
ಪಠ್ಯಪುಸ್ತಕ ನಿರ್ದೇಶನಾಲಯ, ಬೆಂಗಳೂರು

# ಸಾಹಿತ್ಯ ಮಂಜರಿ ೨

(ಕನ್ನಡ ದ್ವಿತೀಯ/ತೃತೀಯ ಭಾಷೆಯ ಪಠ್ಯ ಪುಸ್ತಕ)

೯ 9

## ಒಂಬತ್ತನೆಯ ತರಗತಿ

ಪ್ರಕಾಶಕರು
ವೈಲಿ ಈಸ್ಟರ್ನ್ ಲಿಮಿಟೆಡ್
27, ಬುಲ್ ಟೆಂಪಲ್ ರಸ್ತೆ, ಬಸವನಗುಡಿ
ಬೆಂಗಳೂರು - 560 004

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯ ಹೇ ।
. ಭಾರತ ಭಾಗ್ಯ ವಿಧಾತಾ ॥
ಪಂಜಾಬ ಸಿಂಧು ಗುಜರಾತ ಮರಾಠಾ ।
ದ್ರಾವಿಡ ಉತ್ಕಲ ವಂಗಾ ॥
ವಿಂಧ್ಯ ಹಿಮಾಚಲ ಯಮುನಾ ಗಂಗಾ ।
ಉಚ್ಛಲ ಜಲಧಿ ತರಂಗಾ ॥
ತವ ಶುಭ ನಾಮೇ ಜಾಗೇ ।
ತವ ಶುಭ ಆಶಿಷ ಮಾಗೇ ॥
ಗಾಹೇ ತವ ಜಯಗಾಥಾ ।
ಜನಗಣ ಮಂಗಳದಾಯಕ ಜಯ ಹೇ ॥
ಭಾರತ ಭಾಗ್ಯ ವಿಧಾತಾ ।
ಜಯ ಹೇ ಜಯ ಹೇ ಜಯ ಹೇ ॥
ಜಯ ಜಯ ಜಯ ಜಯ ಹೇ । -- ರವೀಂದ್ರನಾಥ ಠಾಕೂರ್

---

## ನಾಡ ಗೀತೆ

ಜೇ ! ಭಾರತ ಜನನಿಯ ತನುಜಾತೆ
ಜಯ ಹೇ ಕರ್ನಾಟಕ ಮಾತೆ ।

ಜೈ ! ಸುಂದರ ನದಿ ವನಗಳ ನಾಡೆ,
ಜಯ ಹೇ ರಸಋಷಿಗಳ ಬೀಡೆ ।

ಭೂದೇವಿಯ ಮುಕುಟದ ನವಮಣಿಯೆ,
ಗಂಧದ ಚಂದದ ಹೊನ್ನಿನ ಗಣಿಯೆ,
ರಾಘವ ಮಧುಸೂದನರವತರಿಸಿದ
ಭಾರತ ಜನನಿಯ ತನುಜಾತೆ,
ಜಯಹೇ ಕರ್ನಾಟಕ ಮಾತೆ ।

ಜನನಿಯ ಜೋಗುಳದ ವೇದದ ಘೋಷ
ಜನನಿಗೆ ಜೀವವು ನಿನ್ನಾವೇಶ
ಹಸುರಿನ ಗಿರಿಗಳ ಸಾಲೆ
ನಿನ್ನಯ ಕೊರಳಿನ ಮಾಲೆ
ಕಪಿಲ ಪತಂಜಲ ಗೌತಮ ಜಿನನುತ
ಭಾರತ ಜನನಿಯ ತನುಜಾತೆ
ಜಯಹೇ ಕರ್ನಾಟಕ ಮಾತೆ ।

ಶಂಕರ ರಾಮಾನುಜ ವಿದ್ಯಾರಣ್ಯ
ಬಸವೇಶ್ವರ ಮಧ್ವರ ದಿವ್ಯಾರಣ್ಯ
ರನ್ನ ಷಡಕ್ಷರ ಪೊನ್ನ
ಪಂಪಲಕುಮಿಪತಿ ಜನ್ನ
ಕಬ್ಬಿಗರುದಿಸಿದ ಮಂಗಳಧಾಮ ।
ಕವಿಕೋಗಿಲೆಗಳ ಪುಣ್ಯಾರಾಮ ।
ನಾನಕ ರಾಮಾನಂದ ಕಬೀರರ ।

ಭಾರತ ಜನನಿಯ ತನುಜಾತೆ
ಜಯಹೇ ಕರ್ನಾಟಕ ಮಾತೆ ।

ತೈಲಪ ಹೊಯ್ಸಳರಾಳಿದ ನಾಡೆ,
ಡಂಕಣ ಜಕಣರ ನೆಚ್ಚಿನ ಬೀಡೆ,
ಕೃಷ್ಣ ಶರಾವತಿ ತುಂಗಾ
ಕಾವೇರಿಯ ವರರಂಗ

ಚೈತನ್ಯ ಪರಮಹಂಸ ವಿವೇಕರ
ಭಾರತ ಜನನಿಯ ತನುಜಾತೆ,
ಜಯಹೇ ಕರ್ನಾಟಕ ಮಾತೆ ।

ಸರ್ವಜನಾಂಗದ ಶಾಂತಿಯ ತೋಟ
ರಸಿಕರ ಕಂಗಳ ಸೆಳೆಯುವ ನೋಟ,
ಹಿಂದೂ ಕ್ರೈಸ್ತ ಮುಸಲ್ಮಾನ
ಪಾರಸಿಕ ಜೈನರುದ್ಯಾನ
ಜನಕನ ಹೋಲುವ ದೊರೆಗಳ ಧಾಮ
ಗಾಯಕ ವೈಣಿಕರಾರಾಮ
ಕನ್ನಡ ನುಡಿ ಕುಣಿದಾಡುವ ಗೇಹ ।
ಕನ್ನಡ ತಾಯಿಯ ಮಕ್ಕಳ ದೇಹ ।
ಜೈ ! ಭಾರತ ಜನನಿಯ ತನುಜಾತೆ,
ಜಯಹೇ ಕರ್ನಾಟಕ ಮಾತೆ ।

ಜೈ ! ಸುಂದರ ನದಿವನಗಳ ನಾಡೆ,
ಜಯ ಹೇ ರಸ ಋಷಿಗಳ ಬೀಡೆ ।

ಕುವೆಂಪು

ಗೌರವಪ್ರತಿ

ಕರ್ನಾಟಕ ಸರ್ಕಾರ
ಪಠ್ಯಪುಸ್ತಕ ನಿರ್ದೇಶನಾಲಯ, ಬೆಂಗಳೂರು

# ಸಾಹಿತ್ಯ ಮಂಜರಿ–೨

(ಕನ್ನಡ ದ್ವಿತೀಯ/ತೃತೀಯ ಭಾಷೆಯ ಪಠ್ಯಪುಸ್ತಕ)

ಒಂಬತ್ತನೆಯ ತರಗತಿ

೯ ೧

PUBLISHING
FOR ONE WORLD

ಪ್ರಕಾಶಕರು :
ವೈಲಿ ಈಸ್ಟರ್ನ್ ಲಿಮಿಟೆಡ್, ಪಬ್ಲಿಷರ್ಸ್
೨೭, ಬುಲ್ ಟೆಂಪಲ್ ರಸ್ತೆ, ಬಸವನಗುಡಿ
ಬೆಂಗಳೂರು–೪

1

# ಪರಿವಿಡಿ


| | | | ಪುಟ ಸಂಖ್ಯೆ |
|---|---|---|---|
| ಭಾಗ | | | |
| . | ಹಿರಣ್ಯ ರೋಮ | ಜಿ. ಪಿ. ರಾಜರತ್ನಂ | ೧ |
| . | ಮಕ್ಕಳ ಕೂಟದ ಕಲ್ಯಾಣಮ್ಮ | ಶ್ರೀಮತಿ ಎಚ್. ಎಸ್. ಪಾರ್ವತಿ | ೬ |
| . | ವನ್ಯ ಜೀವಿಗಳು | ರಾಮಣ್ಣಾ ಹವಳೆ | ೧೨ |
| . | ಡಾ। ಅಂಬೇಡ್ಕರ್ | ಡಿ. ಕೆ. ಶ್ಯಾಮಸುಂದರ ರಾವ್ | ೧೬ |
| ೫. | ಚಟಗಳು | ಬಿ. ಆರ್. ವಾಡಪ್ಪಿ | ೨೦ |
| ೬. | ವಾಯು ಮಾಲಿನ್ಯ | ಹೆಚ್. ಆರ್. ಕೃಷ್ಣಮೂರ್ತಿ | ೨೪ |
| ೭. | ಗಮಕ ಕಲಾನಿಧಿ ಬಸವಪ್ಪ ಶಾಸ್ತ್ರಿ | ಬ. ಶ್ರೀ. ಪಾಂಡುರಂಗರಾಯ | ೨೯ |
| ೮. | ಹೈಮಾಚಲ ಸಾನಿಧ್ಯದಲ್ಲಿ | ಸ್ವಾಮಿ ಸೋಮನಾಥಾನಂದ | ೩೨ |
| ೯. | ಜಲಪಾತ | ಆರ್. ಜಿ. ರಾಯಕರ | ೩೮ |
| ೦. | ಸರ್. ಸಿ. ವ್ಹಿ. ರಾಮನ್ | ಸಿದ್ದವನಹಳ್ಳಿ ಕೃಷ್ಣಶರ್ಮ | ೪೩ |
| ೧. | ಶಕಾರನ ದರ್ಬಾರ | ಶಂ. ಬಾ. ಜೋಶಿ | ೪೯ |
| ೨. | ಸಮುದ್ರ ಲಂಘನ | ವಂಶಿ | ೫೭ |
| ೩. | ಹಲಗಲಿಯ ಮಹಾವೀರರು | ತಿ. ತಾ. ಶರ್ಮ | ೬೨ |
| ೪. | ಚಾಣಕ್ಯ ರೋಷ | ಕೆಂಪು ನಾರಾಯಣ | ೬೮ |
| ದ್ಯಭಾಗ | | | |
| ೧. | ಹಸಿರು ಹರಿದು ಬಂತು | ಕಾವ್ಯಾನಂದ | ೭೩ |
| ೨. | ಲಾಲ ಬಹಾದ್ದೂರ ಶಾಸ್ತ್ರಿ | ಚೆನ್ನವೀರ ಕಣವಿ | ೭೫ |
| ೩. | ಮಿತ್ರ | ಎಂ. ಅಕಬರ ಅಲಿ | ೭೬ |
| ೪. | ಮಹಾಪೂರ | ಎಂ. ಗೋಪಾಲಕೃಷ್ಣ ಅಡಿಗ | ೭೮ |
| ೫. | ತಾಜಮಹಲ | ಅಂಬಿಕಾತನಯದತ್ತ | ೭೯ |
| ೬. | ಪ್ರೇಮಗಣಿತ | ಕುವೆಂಪು | ೮೧ |
| ೭. | ದುಗ್ಗಾಣಿ | ಪುರಂದರ ದಾಸರು | ೮೩ |
| ೮. | ಜಾನಪದ ತುಂತುರು | ಜನಪದ | ೮೪ |
| ೯. | ವಚನಾಮೃತ ಬಿಂದು | ಶರಣರು | ೮೬ |
| ೧೦. | ದಮಯಂತಿಯ ಶೋಕ | ಕನಕದಾಸ | ೮೮ |



೧. ಪಠ್ಯಪುಸ್ತಕ ಶಿರೋನಾಮೆ: ಸಾಹಿತ್ಯ ಮಂಜರಿ – ೨

೨. ಪ್ರಕಟಣೆ/ಹಕ್ಕುಗಳು: ನಿರ್ದೇಶಕರು,
ಪಠ್ಯಪುಸ್ತಕ ನಿರ್ದೇಶನಾಲಯ, ಬಿ. ಪಿ. ವಾಡಿಯಾ ರಸ್ತೆ,
ಬಸವನಗುಡಿ, ಬೆಂಗಳೂರು – ೪.

೩. ಮೊದಲ ಮುದ್ರಣ: ೧೯೯೩

೪. ಪ್ರಕಾಶಕರು: ವೈಲಿ ಈಸ್ಟರ್ನ್ ಲಿಮಿಟೆಡ್, ಪಬ್ಲಿಷರ್ಸ್
೨೭, ಬುಲ್ ಟೆಂಪಲ್ ರಸ್ತೆ, ಬಸವನಗುಡಿ, ಬೆಂಗಳೂರು–೪.

೫. ಮುದ್ರಣಕಾಗದದ ಬಳಕೆ : ೬೧ X ೮೬ ಸಿ. ಎಂ. ಎಫ್. ಬಿಳಿ
ಮುದ್ರಣಕಾಗದ ೧೫.೭ ಕಿ. ಗ್ರಾಂ.

೬. ಮುದ್ರಿತ ಪ್ರತಿಗಳ ಸಂಖ್ಯೆ: ೩,೦೦,೦೦೦ ಪ್ರತಿಗಳು

೭. ಪಠ್ಯಪುಸ್ತಕದ ಬೆಲೆ: ರೂ ೫ — ೭೫

೮. ಡಿ. ಟಿ. ಪಿ. : ಸತ್ಯಶ್ರೀ ಪ್ರಿಂಟರ್ಸ್, ಚಾಮರಾಜಪೇಟೆ, ಬೆಂಗಳೂರು – ೧೮.


---

## ಮುನ್ನುಡಿ

೧೯೮೬ರ ರಾಷ್ಟ್ರೀಯ ಶಿಕ್ಷಣ ನೀತಿಯ ಹಿನ್ನಲೆಯಲ್ಲಿ ತಯಾರಿಸಲಾದ ಪಠ್ಯವಸ್ತುವಿಗೆ ಅನುಗುಣವಾಗಿ – ಈ ಪಠ್ಯಪುಸ್ತಕವನ್ನು ೧೯೮೯ರಲ್ಲಿ ರಚಿಸಲಾಗಿತ್ತು. ಕನ್ನಡವನ್ನು ಪ್ರಥಮ ಭಾಷೆಯಾಗಿ ಕಲಿಯದೆ ದ್ವಿತೀಯ/ತೃತೀಯ ಭಾಷೆಯಾಗಿ ಕನ್ನಡವನ್ನು ಕಲಿಯುವವರ ಮಟ್ಟವನ್ನು ನಿರೀಕ್ಷಿಸಿ ಈ ಪಠ್ಯವನ್ನು ಪರಿಣತರ ನೆರವಿನಿಂದ ರಚಿಸಲಾಗಿತ್ತು. ಆದರೆ ೧೯೮೯ರಲ್ಲಿ ಜಾರಿಗೆ ಕೊಡಲಾದ ಪಠ್ಯ ಪುಸ್ತಕಗಳ ಮೇಲೆ ವಿದ್ವಾಂಸರಿಂದ, ಶಿಕ್ಷಕರಿಂದ, ಶಿಕ್ಷಕರ ಸಂಘಗಳಿಂದ, ಸಾರ್ವಜನಿಕರಿಂದ ಬಂದ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಈ ಪಠ್ಯವನ್ನು ಮತ್ತೊಮ್ಮೆ ತಜ್ಞರ ಸಮಿತಿಯ ನೆರವಿನಿಂದ ಪರಿಷ್ಕರಿಸಲಾಗಿದೆ. ಒಟ್ಟಿನಲ್ಲಿ ಕನ್ನಡವನ್ನು ದ್ವಿತೀಯ/ತೃತೀಯ ಭಾಷೆಯಾಗಿ ಕಲಿಯುವ ಮಕ್ಕಳಿಗೆ ಎಲ್ಲೂ ಹೊರೆಯಾಗದ ಹಾಗೆ ಗಮನ ನೀಡಲಾಗಿದೆ. ಆದುದರಿಂದ ಅಧ್ಯಾಪಕರು ಈ ಪಠ್ಯವನ್ನು ತರಗತಿಯಲ್ಲಿ ಬೋಧಿಸುವಾಗ – ಕನ್ನಡ ಭಾಷೆಯ ಸೊಬಗು, ಸೌಂದರ್ಯಕ್ಕೆ ಚ್ಯುತಿಬಾರದ ಹಾಗೆ ಹಾಗೂ ಕನ್ನಡ ಭಾಷೆಯನ್ನು ಕಲಿಯಬೇಕೆಂಬ ಅಭಿಮಾನ ಹುಟ್ಟುವ ರೀತಿಯಲ್ಲಿ ಬೋಧಿಸುವರೆಂದು ಆಶಿಸಲಾಗಿದೆ. ಈ ಪಠ್ಯ ಪುಸ್ತಕವನ್ನು ರಚಿಸಲು ನೆರವಾದವರೆಲ್ಲರಿಗೂ ಕೃತಜ್ಞತೆಗಳು.

ಈ ಪಠ್ಯವನ್ನು ಸಕಾಲದಲ್ಲಿ ಹೊರತಂದ ಪ್ರಕಾಶಕರಿಗೂ ನಮ್ಮ ಅಭಿನಂದನೆಗಳು.

ಬೆಂಗಳೂರು
ದಿನಾಂಕ : ೧೩–೧೧–೧೯೯೨

ಯ. ರಾ. ಅಚ್ಯುತರಾವ್
ನಿರ್ದೇಶಕರು, ಪಠ್ಯಪುಸ್ತಕ ಇಲಾಖೆ
ಬೆಂಗಳೂರು – ೪.

# ೧. ಹಸಿರು ಹರಿದು ಬಂತು

ಹಸಿರು ಹರಿದು ಬಂತು, ಕೊಡಗಿನಲ್ಲಿ ಇಂತು
ಬೆಟ್ಟದಿಂದ ಕೆಳಗೆ ಉರುಳಿ ಘಾಟ್ಟದಲ್ಲಿ ತೆವಳಿ
ತಿಟ್ಟಕೇರಿ ಕಣಿವೆಗಿಳಿದು, ಬಂಡೆಗಳಲಿ ನುಸುಳಿ
ಅತ್ತಣಿಂದ ಇತ್ತಣಿಂದ, ಎತ್ತಣಿಂದ ಬಂತು!
ಹಸಿರು ಹರಿದು ಬಂತು, ಕೊಡಗಿನಲ್ಲಿ ಇಂತು!

ಮರಮರಗಳ ನರಗಳಲ್ಲಿ, ರಕ್ತವಾಗಿ ಹರಿದು
ಲತೆಲತೆಗಳ ತ್ವಚಗಳಲ್ಲಿ ಹಚ್ಚೆ ಚಿತ್ರ ಬರೆದು
ಚಿತ್ತಬಂದ ಹಾಗೆ ಸುತ್ತಿ ಮತ್ತೆ ಮರಳಿ ಬಂತು
ಹಸಿರು ಹರಿದುಬಂತು ಕೊಡಗಿನಲ್ಲಿ ಇಂತು.

ಕಾಫಿ ತೋಟದಲ್ಲಿ ಚಲಿಸಿ ಕಿತ್ತಳೆ ಮರ ಬಳಸಿ
ಏಲಕ್ಕಿಯ ಆಲಂಗಿಸಿ ಬತ್ತದ ಮೈ ತೊಳೆಸಿ
ಕಾವೇರಿಗೆ ಕೈಯ ಮುಗಿದು ಕಾಣ್ಕೆಯಿತ್ತು ಬಂತು
ಹಸಿರು ಹರಿದು ಬಂತು ಕೊಡಗಿನಲ್ಲಿ ಇಂತು.

ಹಸಿರನ್ನೆ ಉಸಿರಾಡಿಸಿ ಹಸಿರನುಟ್ಟು ತೊಟ್ಟು
ಹಸಿರಕೊಂಡು ಹಸಿರನುಂಡು ಹಸಿರ ಹಣೆಗೆ ಇಟ್ಟು
ಹಸಿರ ಬಸಿರನಾಂತ ಮಲೆಗೆ ನೆಲಕೆ ಜಲಕೆ ಬಂತು
ಹಸಿರು ಹರಿದು ಬಂತು ಕೊಡಗಿನಲ್ಲಿ ಇಂತು.

ಹಚ್ಚಹಸಿರು ಪಚ್ಚೆಹಸಿರು ಗಿಳಿಯ ತಿಳಿಯ ಹಸಿರು
ಅಚ್ಚಹಸಿರು ಸ್ವಚ್ಛಹಸಿರು ಎಳೆಯ ಹಸುಳೆ ಹಸಿರು
ಹಲವು ಬಗೆಯ ಹಸಿರು ಮೂಲ ಕೊಸರಿಕೊಂಡು ಬಂತು
ಹಸಿರು ಹರಿದು ಬಂತು ಕೊಡಗಿನಲ್ಲಿ ಇಂತು.

ಚರಿಸದ ಹುಲ್ಲಿನಲಿ ಚರಿಸಿ ಹರಿಯದಂತೆ ಹರಿದು
ನಿದ್ದೆಯಿಂದ ಎದ್ದಹಾಗೆ ಎದ್ದು ಮೈಯ ಮುರಿದು
ಒನಪಿನಿಂದ ಕೊಂಕಿನಿಂದ ಬಿಂಕದಿಂದ ಬಂತು
ಹಸಿರು ಹರಿದು ಬಂತು ಕೊಡಗಿನಲ್ಲಿ ಇಂತು.

— ಕಾವ್ಯಾನಂದ.

## ಅಭ್ಯಾಸ

ಕವಿ ಕಾವ್ಯ ಪರಿಚಯ : 'ಕಾವ್ಯಾನಂದ' ಎಂಬುದು ಶ್ರೀ ಸಿದ್ಧಯ್ಯ ಪುರಾಣಿಕರವರ ಕಾವ್ಯನಾಮ. ಶ್ರೀಯುತರು ಐ.ಎ.ಎಸ್. ಪದವಿ ಪಡೆದು ರಾಜ್ಯದ ಉನ್ನತ ಅಧಿಕಾರದಲ್ಲಿದ್ದು ನಿವೃತ್ತರಾದವರು. ಹೆಸರಾಂತ ಕವಿಗಳು, ನಾಟಕಕಾರರು, ಕಥೆಗಾರರು, 'ಶರಣ ಚರಿತಾಮೃತ' ಎಂಬುದು ಇವರ ಉತ್ತಮ ಚರಿತ್ರ ಗ್ರಂಥ. ಇವರ ವಚನೋದ್ಯಾನ ಎಂಬ ಗ್ರಂಥಕ್ಕೆ ಬಿಲ್ಹಾರ ಪ್ರಶಸ್ತಿ ದೊರಕಿದೆ. ಜಲಪಾತ, ಮಾನಸ ಸರೋವರ, ಕಲ್ಲೋಲ ಮಾಲೆ ಇವು ಅವರ ಕೆಲವು ಕವನ ಸಂಕಲನಗಳು. ಕೊಡಗಿನ ಜಿಲ್ಲಾಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದ ಶ್ರೀಯುತರು ಈ ಕವನದಲ್ಲಿ ಅಲ್ಲಿಯ ಹಸಿರನ್ನು ಕುರಿತು ಹೇಳಿದ್ದಾರೆ.

ಪದಗಳ ಅರ್ಥ : ತೆವಳಿ–ಹರಿದಾಡಿ, ತಿಟ್ಟ–ದಿಣ್ಣೆ, ತ್ವಚ–ಚರ್ಮ, ತೊಗಲು, ಚಲಿಸದ–ಚಲಿಸದ, ಒನಪು–ಬೆಡಗು, ಬಿಂಕ–ಬಿಗುಮಾನ, ಜಂಭ.

೧. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.
   ಅ) ಕೊಡಗಿನಲ್ಲಿ ಹಸಿರು ಹರಿದು ಬಂದದ್ದು ಹೇಗೆ ಹೇಗೆ?
   ಆ) ಮರಗಿಡಗಳಲ್ಲಿ ಹಸಿರು ಹೇಗೆ ಬಂತು?
   ಇ) ಕಾವೇರಿಗೆ ಕೈಮುಗಿದು ಕಾಣ್ಕೆ ನೀಡಲು ಹಸಿರು ಎಲ್ಲಿಗಾಗಿ ಬಂತು!
   ಈ) ಮಳೆ, ನೆಲ, ಜಲಗಳು ಹಸಿರನ್ನು ಏನೇನು ಮಾಡಿದುವು?
   ಉ) ಎಂತೆಂತಹ ಹಸಿರು ಹರಿದು ಬಂತು?
   ಊ) ಒನಪಿನಿಂದ ಕೂಡಿದ ಹಸಿರು ಎಲ್ಲೆಲ್ಲಿ ಹರಿದು ಬಂತು?

೨. ಈ ಕೆಳಗಿನ ಪ್ರಶ್ನೆಗಳಿಗೆ ಹತ್ತು ವಾಕ್ಯಗಳಲ್ಲಿ ಉತ್ತರಿಸಿ.
   ಅ) ಕೊಡಗಿನಲ್ಲಿ ಹಸಿರು ಹರಿದು ಬಂದ ರೀತಿಯನ್ನು ಕವಿಯ ಆಶಯದಂತೆ ವಿವರಿಸಿರಿ.
   ಆ) ಈ ಪದ್ಯದ ಸ್ವಾರಸ್ಯವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

೩. ಈ ವಾಕ್ಯಗಳಲ್ಲಿರುವ ಅರ್ಥದ ಸೊಗಸನ್ನು ವಿವರಿಸಿರಿ.
   ಅ) ಅತ್ತಣಿಂದ, ಇತ್ತಣಿಂದ ಎತ್ತಣಿಂದ ಬಂತು!
   ಆ) ಚಿತ್ತ ಬಂದ ಹಾಗೆ ಸುತ್ತಿ ಮತ್ತೆ ಮರಳಿ ಬಂತು
   ಇ) ಹಸಿರ ಬಸಿರನರಿತ ಮಲೆಗೆ
   ಈ) ಹಲವು ಬಗೆಯ ಹಸಿರು ಮೂಲ ಕೊಸರಿಕೊಂಡು ಬಂತು!
   ಉ) ಬಿಂಕದಿಂದ ಬಂತು.

೪. ಈ ಪ್ರಾಸಪದಗಳನ್ನು ನಿಮ್ಮ ವಾಕ್ಯಗಳಲ್ಲಿ ಬಳಸಿರಿ.
   ತೆವಳಿ–ನುಸುಳಿ, ಹರಿದು–ಬರೆದು, ಹರಿದು–ಮುರಿದು–ಬಳಸಿ–ತೊಳೆಸಿ, ಕೊಟ್ಟು–ಇಟ್ಟು ಬಂತು–ಇಂತು